**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

**ದೊಡ್ಡಬಳ್ಳಾಪುರ**

**ಸಿ ಸಿ ನಂ : 10/2018**

**ಪಿ ಡಬ್ಲ್ಯೂ - 5**

**ಸಿ ಡಬ್ಲ್ಯೂ - 8**

**ದಿಃ 15.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ರಾಜೇಶ್ವರಿ**

**ಗಂಡನ ಹೆಸರು ಃ ನಟರಾಜು**

**ವಯಸ್ಸು ಃ 61 ವರ್ಷ**

**ಉದ್ಯೋಗ ಃ ನಿವೃತ್ತ ಶಿಕ್ಷಕಿ**

**ವಿಳಾಸ ಃ ಚಿಕ್ಕಬೆಳವಂಗಲ, ದೊಡ್ಡಬಳ್ಳಾಪುರ ತಾಲ್ಲೂಕು**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ಸಾಕ್ಷಿಯು ನಿಪಿ-2 ಪಂಚನಾಮೆಯಲ್ಲಿನ ತಮ್ಮ ಸಹಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ಸಹಿಯನ್ನು ನಾನು ದಿಃ 05.03.2015 ರಂದು ಚಾಸಾ-2 ರವರ ಮನೆಯಲ್ಲಿ ಸಿಲಿಂಡರ್ ಸ್ಫೋಟದ ವಿಚಾರವಾಗಿ ಸ್ಥಳದಲ್ಲಿ ಬೆಳಿಗ್ಗೆ 11-00 ರಿಂದ 11-30 ಗಂಟೆ ಸಮಯದಲ್ಲಿ ಮಹಜರ್ ಮಾಡಿ ಸಹಿಯನ್ನು ಪಡೆದರು. ಅದೇ ಸಮಯದಲ್ಲಿ 2 ಸಿಲಿಂಡರ್ ಗಳನ್ನು ಅಮಾನತ್ತುಪಡಿಸಿಕೊಂಡರು. ಸಾಕ್ಷಿಯು 2 ಸಿಲಿಂಡರ್ ಇರುವ ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-7 ಮತ್ತು 8 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ರಿಂದ 5 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ.ಜಿ. ವಕೀಲರಿಂದ**

ಪೋಲೀಸರು ಕೃತ್ಯ ನಡೆದ ಸ್ಥಳಕ್ಕೆ ಹಾಜರಿರುವಂತೆ ನನಗೆ ನೋಟೀಸ್‌ನ್ನು ನೀಡಿದ್ದರು. ಪೋಲೀಸರು ಕೃತ್ಯ ನಡೆದ ಸ್ಥಳಕ್ಕೆ ಬೆಳಿಗ್ಗೆ 10-00 ಗಂಟೆಗೆ ಬಂದರು. ನಾವು ಕೃತ್ಯ ನಡೆದ ಸ್ಥಳದಲ್ಲಿ ರಾತ್ರಿಯಿಂದಲೇ ಇದ್ದೆವು. ಕೃತ್ಯ ನಡೆದ ಸ್ಥಳದ ಚೆಕ್ಕುಬಂಧಿ ಹೇಳಲು ಗೊತ್ತಿಲ್ಲ. ನಿಪಿ-2 ಪಂಚನಾಮೆಯಲ್ಲಿನ ವಿಚಾರಗಳನ್ನು ನನಗೆ ಓದಿ ತಿಳಿಸಿರುವುದಿಲ್ಲ. ನಿಪಿ-2 ರಲ್ಲಿನ ಪಂಚನಾಮೆಯನ್ನು ಬರೆದ ನಂತರವೇ ಸಹಿ ಮಾಡಿರುತ್ತೇನೆ. ನಾನು ಕೃತ್ಯ ನಡೆದ ಸ್ಥಳದಲ್ಲಿ ಇರಲಿಲ್ಲ ಹಾಗೂ ನಿಪಿ-2 ಕ್ಕೆ

ಸಹಿಯನ್ನು ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಂದೆ ಭಾರತ್ ಗ್ಯಾಸ್ ಸಿಲಿಂಡರ್ ಹಾಗೂ ಹೆಚ್.ಪಿ. ಗ್ಯಾಸ್ ಸಿಲಿಂಡರ್ ಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸಿಲಿಂಡರ್ ಗಳನ್ನು ಪೋಲೀಸರು ತಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಂದೆ ತುಂಬಿದ 4 ಸಿಲಿಂಡರ್ ಗಳನ್ನು ಹಾಗೂ ಖಾಲಿ ಇರುವ 4 ಸಿಲಿಂಡರ್ ಗಳನ್ನು ಅಮಾನತ್ತುಪಡಿಸಿಕೊಂಡಿರಬಹುದು ನನಗೆ ನೆನಪಿಲ್ಲ. ನನ್ನ ಮುಂದೆ ಯಾವುದೇ ಸಿಲಿಂಡರ್ ಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-2 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** **ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**